ಡಾಕ್ಯುಮೆಂಟ್ಸ್ ಇದೆ. ಅವರು ತಪ್ಪಿತಸ್ಥರಾದರೆ ವಿಧಾನಸೌಧದ ಎದುರುಗಡೆ ನೇಣು ಹಾಕಿ. ಆದರೆ ಮೊದಲು ವಿಚಾರಣೆ ಮಾಡಿ.

ಶ್ರೀ ಸಿ. ಬೈರೇಗೌಡ.—ವಿಚಾರಣೆ ಈಗಾಗಲೇ ಆಗಿದೆ. ಅದರಂತೆ ಅವರನ್ನು ವಜಾ ಮಾಡ ಬೇಕೆಂದು ತೀರ್ಮಾನ ತೆಗೆದುಕೊಳ್ಳಲಾಗಿದೆ ಸರ್ಕಾರವಲ್ಲಾ ವಿಚಾರವನ್ನೂ ಅಮೂಲಾಗ್ರವಾಗಿ ಪರಿಶೀಲನೆ ಮಾಡಿದೆ. ಪರಿಶೀಲನೆ ಮಾಡಿ ಅವರ ಮೇಲ್ಮನವಿಯನ್ನು ಸರ್ಕಾರ ವಜಾ ಮಾಡಿದೆ. ಅದಾದಮೇಲೆ ರಾಜ್ಯಪಾಲರಿಗೂ ಅವರು ಮೇಲ್ಮನವಿಯನ್ನು ಸಲ್ಲಿಸಿದ್ದಾರೆ. ಸರ್ಕಾರದಿಂದ ಎಲ್ಲಾ ಮಾಹಿತಿಯನ್ನು ರಾಜ್ಯಪಾಲರು ಪಡೆದು ಅವರೂ ಸಹ ಸರ್ಕಾರ ಮತ್ತು ನಿರ್ದೇಶಕರು ತೆಗೆದುಕೊಂಡಿರುವ ಕ್ರಮ ಸರಿಯಾಗಿದೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಈ ವಿಷಯ ಹಿಂದೆ ಕೂಡಾ ಈ ಸದನದಲ್ಲಿ ಬಂದಿತ್ತು. ಈ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಕೆಲಸವನ್ನು ಮಾಡಬಹುದು. ಈ ಇಲಾಖೆಯಲ್ಲಿ ಒಬ್ಬರ ಮೇಲೆ ಒಬ್ಬರ ಪ್ರಜ್ಯುಡೀಸ್ ಬೆಳೆದು ಈ ರೀತಿ ಆಗಿದೆ. ಒಂದು ಕೇಸು ತಯಾರು ಮಾಡಬೇಕು ಎಂದು ವಿರುದ್ಧ ಕೇಸ್ ತಯಾರು ಮಾಡಿ ಡಿಸ್‌ಮಿಸ್ ಮಾಡತಕ್ಕ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಆದ್ದರಿಂದ ತಾವೇ ಖುದ್ದಾಗಿ ಸಂಬಂಧಪಟ್ಟ ಎಲ್ಲಾ ಕಡತಗಳನ್ನು ತರಿಸಿ ಪುನಃ ಪರಿಶೀಲನೆ ಮಾಡಿ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ, ಕಳೆದ ಸಾರಿ ಈ ಸಭೆಯಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗೆ ಉತ್ತರ ಕೊಡುವ ಸಂದರ್ಭದಲ್ಲಿ ಈ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದೇನೆ. ಆ ಪ್ರಕಾರ ನಾನು ಎಲ್ಲಾ ಸಂಬಂಧಪಟ್ಟ ಕಡತಗಳನ್ನು ದಾಖಲೆಗಳನ್ನು ತರಿಸಿ ನೋಡಿ ಕಾನೂನು ರೀತ್ಯ, ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲದ ಪರಿಸ್ಥಿತಿಯಿಂದ ನಾನು ಅದರ ಮೇಲೆ ಏನೂ ಕಾರ್ಯಕ್ರಮವನ್ನು ತೆಗೆದು ಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಜಿ ಎಂ. ಕಾನಡೆ.—ಅಲ್ಲಿ ಸರಿಯಾದ ಒಂದು ಎನ್‌ಕ್ವಯರಿ ಆಗಿಲ್ಲ. ಆತ ತಪ್ಪು ಮಾಡಿದಾನೆಂದು ತಿಳಿದರೆ ಫಾಸಿ ಆರ್ಡರ್ ಕೊಡಿ. ೭೧ ಡಾಕ್ಯುಮೆಂಟ್ಸ್ ಏನಿವೆ ಅವನ್ನು ನೋಡಿ ಇದನ್ನು ಮಾಡಿಲ್ಲ.

ಶ್ರೀ ಸಿ. ಬೈರೇಗೌಡ.—ಈ ವಿಷಯದ ಬಗ್ಗೆ ನಾನು ಪದೇ ಪದೇ ಹೇಳುತ್ತಿದ್ದೇನೆ ಈ ಬಗ್ಗೆ ವಿಚಾರಣೆ ಆಗಿದ್ದು ಅವರಿಗೆ ಏನಾದರೂ ಅನ್ಯಾಯವಾಗಿದ್ದರೆ ಅವರು ನ್ಯಾಯಾಲಯದಲ್ಲಿ ನ್ಯಾಯ ಪಡೆಯಬಹುದು. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರೂ ಕೂಡಾ ಒಂದು ಸಭೆಯನ್ನು ನಡೆಸಿ ದ್ದಾರೆ. ದಲಿತಕ್ರಿಯಾ ಸಮಿತಿ ಹಾಗೂ ನನ್ನ ಜೊತೆ ಸಭೆ ನಡೆಸಿದ್ದಾರೆ. ಅಲ್ಲಿ ಬಂದಿದ್ದ ಪ್ರತಿನಿಧಿಗಳಿಗೆ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೂ ಸಹಾ ಸ್ಪಷ್ಟವಾಗಿ ಹೇಳಿದ್ದಾರೆ. ಅವರಿಂ ಕೋರ್ಟಿಗೆ ಹೋಗುವು ದಾದರೆ, ಕಾನೂನು ಬದ್ಧವಾಗಿ ಅವರಿಗೆ ಲೀಗಲ್ ಏಡ್ ಕೊಡುವ ಅವಕಾಶವಿದೆ, ಅದನ್ನು ಕೊಡು ತ್ತೇವೆ, ಸರ್ಕಾರದ ಕೈ ಕಟ್ಟಿರುವುದರಿಂದ ಕೋರ್ಟಿಗೆ ಹೋಗುವುದೂ ಸೂಕ್ತವೆಂದು ಮುಖ್ಯಮಂತ್ರಿ ಯವರೂ ತಿಳಿಸಿದ್ದಾರೆ. ನಾನು ಈ ಬಗ್ಗೆ ವಿಚಾರಣೆ ಮಾಡಬೇಕೆಂದು ಹೇಳುತ್ತಿದ್ದಾರೆ. ಯಾವ ಕಾನೂನಿನ ರೀತ್ಯ ನನಗೆ ವಿಚಾರಣೆ ಮಾಡುವುದಕ್ಕೆ ಅವಕಾಶ ಇದೆಯೋ ಅದು ನನಗೆ ತಿಳಿದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಸರ್ಕಾರ ಮಾಡಬಹುದು.

ಕನ್ನಡ ಹಾಗೂ ಇಂಗ್ಲೀಷ್ ಪತ್ರಿಕೆಗಳಿಗೆ ಕೊಟ್ಟಿರುವ ಜಾಹೀರಾತುಗಳಿಗೆ ತಗಲಿದ ವೆಚ್ಚ

೬೭೫. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ವಾರ್ತಾ, ಯುವಜನ ಸೇವಾ, ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೪–೮೫ ಮತ್ತು ೧೯೮೫–೮೬ನೇ ಸಾಲುಗಳಲ್ಲಿ ಇಂಗ್ಲೀಷ್ ಮತ್ತು ಕನ್ನಡ ಪತ್ರಿಕೆಗಳಿಗೆ ಕೊಟ್ಟಿರುವ ಸರ್ಕಾರಿ ಜಾಹೀರಾತುಗಳಿಗಾಗಿ ತಗಲಿದ ವೆಚ್ಚವೆಷ್ಟು ?

ಆ) ಸಣ್ಣ ಮತ್ತು ಅತಿ ಸಣ್ಣ ಪತ್ರಿಕೆಗಳಿಗಾಗಿ ಕೊಟ್ಟ ಜಾಹೀರಾತುಗಳ ಖರ್ಚು ಎಷ್ಟು ?

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು).—

ವರ್ಷ	ಕನ್ನಡ ಪತ್ರಿಕೆಗಳು	ಇಂಗ್ಲೀಷ್ ಪತ್ರಿಕೆಗಳು
೧೯೮೪-೮೫	ರೂ. ೮೭,೧೧,೫೪೦-೦೦	ರೂ. ೫೪,೫೮,೪೭೧-೦೦
೧೯೮೫-೮೬	ರೂ. ೪೫,೪೫,೧೮೬-೦೦	ರೂ. ೨೧,೦೩,೧೯೭-೦೦

	ವರ್ಷ	ಕನ್ನಡ ಪತ್ರಿಕೆಗಳು	ಇಂಗ್ಲೀಷ್ ಪತ್ರಿಕೆಗಳು
ಮಧ್ಯಮ	೧೯೮೪-೮೫	ರೂ. ೬,೦೯,೧೬೫-೦೦	ರೂ. ೧,೫೩,೫೮೮-೦೦
ವರ್ಗದ ಪತ್ರಿಕೆಗಳು	೧೯೮೫-೮೬	ರೂ. ೯,೮೩,೬೩೩-೦೦	ರೂ. ೧,೦೨,೫೫೪-೦೦
ಸಣ್ಣ	೧೯೮೪-೮೫	ರೂ. ೨೬,೦೩ ೦೦೫-೦೦	ರೂ. ೪೭,೯೩೩-೦೦
ಪತ್ರಿಕೆಗಳು	೧೯೮೫-೮೬	ರೂ. ೧೨,೦೫,೨೭೨-೦೦	ರೂ. ೩೫,೬೩೩-೦೦

ಶ್ರೀ ಯು. ಭೂಪತಿ —ಅಧ್ಯಕ್ಷರೇ, ೧೯೮೪-೮೫ರಲ್ಲಿ ಜಾಹಿರಾತಿಗಾಗಿ ಖರ್ಚು ಮಾಡಿರತಕ್ಕ ಮೊತ್ತವನ್ನು ೧೯೮೫-೮೬ಕ್ಕೆ ಹೋಲಿಸಿದರೆ ಹೆಚ್ಚು ಕಡಿಮೆ ಅರ್ಧದಷ್ಟು ಖರ್ಚು ಕಡಿಮೆಯಾಗಿದೆ. ಇತ್ತೀಚಿನ ದಿನಪತ್ರಿಕೆಗಳಲ್ಲಿ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗೆ ಸಂಬಂಧಪಟ್ಟ ಜಾಹಿರಾತನ್ನು ನೋಡುವುದಾದರೆ, ಹಿಂದೆ ದೊಡ್ಡ ಕಾಲಮ್‌ನಲ್ಲಿ ಜಾಹಿರಾತು ಕೊಡುತ್ತಿದ್ದುದನ್ನು ಬದಲಾಯಿಸಿ ಈಗ ಕೇವಲ ಸಣ್ಣ ಕಾಲಮ್‌ನಲ್ಲಿ ವಿಷಯವನ್ನು ಹೇಳಿ ಎಷ್ಟಕ್ಕ ವಿಷಯವನ್ನು ಇಂತಹ ಕಚೇರಿಯಲ್ಲಿ ವಿಚಾರಿಸ ಬಹುದು ಎಂದು ಕೊಟ್ಟಿರುತ್ತಾರೆ. ಈ ರೀತಿ ಮಾರ್ಪಾಟು ಮಾಡುವುದಕ್ಕೆ ಕಾರಣವೇನು ? ಸಂಪೂರ್ಣ ವಿವರವನ್ನು ಏಕೆ ತಾವು ಕೊಡುವುದಿಲ್ಲ ? ಎರಡನೆಯದಾಗಿ, ಏನು ಖರ್ಚು ತಾವು ತೋರಿಸಿದ್ದೀರಿ ಆ ಹಣ ರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದ ಹೊರಗಡೆ ಮುದ್ರಣವಾಗತಕ್ಕ ವಾರ ಪತ್ರಿಕೆಗಳು, ಪಾಕ್ಷಿಕ ಪತ್ರಿಕೆಗಳು, ಮಾಸಪತ್ರಿಕೆಗಳು ಹಾಗೂ ದಿನಪತ್ರಿಕೆಗಳು ಏನು ಇವೆ ಇವುಗಳಿಗೂ ನೀವು ಕೊಡುವ ಜಾಹಿರಾತಿನ ಹಣ ಇದರಲ್ಲಿ ಅಡಕವಾಗಿದೆಯೇ? ಅಥವಾ ಕೇವಲ ರಾಜ್ಯದಲ್ಲಿ ಮುದ್ರಣವಾಗತಕ್ಕ ಪತ್ರಿಕೆಗಳ ಬಗ್ಗೆ ಮಾತ್ರ ವಿವರ ಕೊಟ್ಟಿದ್ದೀರಾ ? ಮೂರನೆಯದಾಗಿ, ಕನ್ನಡ ಮತ್ತು ಆಂಗ್ಲಭಾಷೆಗಳ ಅತಿ ಕಡಿಮೆ ಹಾಗೂ ಅತಿ ಹೆಚ್ಚು ಮೊತ್ತದ ಜಾಹಿರಾತನ್ನು ಪಡೆದಂತಹ ಪತ್ರಿಕೆಗಳು ಯಾವುವು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಜೀವರಾಜ ಆಳ್ವ.—ಅಧ್ಯಕ್ಷರೇ ೧೯೮೫-೮೬ನೇ ಸಾಲಿನಲ್ಲಿ ಇತ್ತೀಚಿನವರೆಗೆ ಖರ್ಚು ಮಾಡಲಾದ ಹಣದ ಬಗ್ಗೆ ವಿವರ ಕೊಡಲಾಗಿದ್ದು ಮಾರ್ಚಿ ಅಂತ್ಯದ ವರೆಗೆ ಇನ್ನೂ ಕೂಡಾ ೫೦ ರಿಂದ ೬೦ ಲಕ್ಷದಷ್ಟು ಬಿಲ್‌ಗಳು ಪಾಸ್ ಆಗಬಹುದಾಗಿದೆ. ಆದುದರಿಂದ ಈ ಸಾಲಿನಲ್ಲಿ ಹಿಂದಿನ ಸಾಲಿಗಿಂತ ಸ್ವಲ್ಪ ಹೆಚ್ಚು ಖರ್ಚು ಮಾಡಿದಂತೆ ಆಗುತ್ತದೆ. ಇನ್ನು ಟೆಂಡರ್ ನೋಟಿಫಿಕೇಷನ್‌ಗಳು ಬಹಳ ಉದ್ದವಿರುವುದರಿಂದ ಅದಕ್ಕೋಸ್ಕರ ಹೆಚ್ಚು ಖರ್ಚು ಬರುತ್ತಿದ್ದು ಸಂಬಂಧಪಟ್ಟ ಇಲಾಖೆಗಳೊಡನೆ ಚರ್ಚೆ ಮಾಡಿ ಸಂಕ್ಷಿಪ್ತ ಜಾಹಿರಾತು ಕೊಡುವ ಬಗ್ಗೆ ತೀರ್ಮಾನ ಮಾಡಲಾಗಿದೆ. ಹಾಗೂ ಹಣಕಾಸಿನ ಕೊರತೆ ಕೂಡ ಇರುವುದನ್ನು ನಾವು ನೋಡಬೇಕಾಗುತ್ತದೆ. ಇನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳ ಅತಿ ಕಡಿಮೆ ಹಾಗೂ ಅತೀ ಹೆಚ್ಚು ಮೊತ್ತದ ಜಾಹಿರಾತನ್ನು ಪಡೆದಂತಹ ಪತ್ರಿಕೆಗಳ ಬಗ್ಗೆ ನನ್ನ ಹತ್ತಿರ ವಿವರ ಇಲ್ಲ. ಅದನ್ನು ಮಾನ್ಯ ಸದಸ್ಯರಿಗೆ ನಾನು ತಲುಪಿಸಿಕೊಡುತ್ತೇನೆ.

ಶ್ರೀ ಯು. ಭೂಪತಿ.—ರಾಷ್ಟ್ರಮಟ್ಟದಲ್ಲಿ ಬರತಕ್ಕ ಪತ್ರಿಕೆಗಳಿಗೆ ಕೊಟ್ಟ ಜಾಹಿರಾತು ಖರ್ಚು ಇದರಲ್ಲಿ ಸೇರಿದೆಯೋ ಅಥವಾ ರಾಜ್ಯದಲ್ಲಿ ಪ್ರಕಟಣೆಗೊಳ್ಳತಕ್ಕ ಪತ್ರಿಕೆಗಳಿಗೆ ಕೊಟ್ಟ ಖರ್ಚು ಮಾತ್ರ ಇದರಲ್ಲಿ ಸೇರಿದೆಯೋ ?

ಶ್ರೀ ಜೀವರಾಜ ಆಳ್ವ.—ಎರಡನ್ನೂ ಸೇರಿಸಿ ಕೊಟ್ಟಿದ್ದೇವೆ.